ಈ)ಹೌದು, ಭಾರತ ಆಹಾರ ನಿಗಮದವರು ಕಳೆದ 8-10 ತಿಂಗಳುಗಳಿಂದ ಕರ್ನಾಟಕದಲ್ಲಿ ರಿಲ್ಯಾಕ್ಸ್‌ಸ್ಪೇಷಿಪಿಕೇಶನ್ ಸಡಿಲಿಸಿದ ಗುಣಮಟ್ಟದ ಅಕ್ಕಿಯನ್ನು ವಿತರಿಸುತ್ತಿದ್ದಾರೆ. ರಿಲ್ಯಾಕ್ಸ್ ಸ್ಪೇಷಿಪಿಕೇಶನ್ ಅಡಿಯಲ್ಲಿ ಅಕ್ಕಿಯು ಬಣ್ಣ ರಹಿತವಾಗಿದ್ದು ಶೇಕಡ 30 ನುಚ್ಚನ್ನು ಹೊಂದಿರುತ್ತದೆ. ಈ ಅಕ್ಕಿಯನ್ನು ಪೋಲೀಸ್ ಇಲಾಖೆ ಸೇರಿದಂತೆ ಎಲ್ಲರಿಗೂ ಕೊಡಲಾಗುತ್ತಿದೆ. ಸಗಟು ಮಾರಾಟದಾರರು ಆಹಾರ ಧಾನ್ಯಗಳನ್ನು ಎತ್ತುವಳಿ ಮಾಡುವಾಗ ಸಂಯೋಜಿತ ಮಾದರಿಯನ್ನು ಪಡೆದು ಎತ್ತುವಳಿ ಮಾಡಲು ಹಾಗೂ ಅಕ್ಕಿಯ ಗುಣಮಟ್ಟ ಕಳಪೆ ಆಗಿದ್ದಲ್ಲಿ ಆದಾಗ್ಯೂ ತಿರಸ್ಕರಿಸಲು ಮತ್ತು ಅಂತಹ ಅಕ್ಕಿಗಳನ್ನು ಪ್ರಯೋಗಾಲಯಕ್ಕೆ ವಿಶ್ಲೇಷಣೆಗಾಗಿ ಹಾಗೂ ಅಕ್ಕಿಯ ಗುಣಮಟ್ಟ ಪಿಎಫ್‌ಎ ಮಟ್ಟದಲ್ಲಿ ಇದೆಯೇ? ಎಂಬುದನ್ನು ಪರಿಶೀಲಿಸಲಾಗುತ್ತಿದೆ. ಈ ವಿಷಯದ ಬಗ್ಗೆ ಕೇಂದ್ರ ಹಾಗೂ ಭಾರತ ಆಹಾರ ನಿಗಮ ದವರಿರೊಂದಿಗೆ ಪ್ರಸ್ತಾಪಿಸಿಲಾಗಿದೆ.

ಕುಣಿಗಲ್ ತಾಲ್ಲೂಕು ಕೆಂಪನ ಹಳ್ಳಿಯಲ್ಲಿ ವಿದ್ಯುತ್ ಉಪಕೇಂದ್ರದ ಸ್ಥಾಪನೆ.

677 (1061) ಶ್ರೀ ಎಸ್.ಪಿ. ಮುದ್ದಹನುಮೇಗೌಡ(ಕುಣಿಗಲ್) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಕುಣಿಗಲ್ ತಾಲ್ಲೂಕು, ಕೆಂಪನಹಳ್ಳಿಯಲ್ಲಿ 66: 11 ಕೆ.ವಿ. ಸಾಮಥ್ಯವುಳ್ಳ ವಿದ್ಯುತ್ ಉಪಕೇಂದ್ರದ ಅಗತ್ಯತೆ ಇರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಆ) ಹಾಗಿದ್ದಲ್ಲಿ, ಈ ನಿಟ್ಟಿನಲ್ಲಿ ಸರ್ಕಾರದವರು ಕೈಗೊಂಡ ಕ್ರಮವೇನು?

ಶ್ರೀಶರಣಬಸಪ್ಪ ದರ್ಶನಾಪುರ (ಇಂಧನ ರಾಜ್ಯ ಸಚಿವರು) -

ಅ) ಮತ್ತು ಆ) ಕುಣಿಗಲ್ ತಾಲ್ಲೂಕು ಕೆಂಪನಹಳ್ಳಿಯಲ್ಲಿ ಒಂದು 66: 11 ಕೆ.ಐ.ವಿದ್ಯುತ್ ವಿತರಣಾ ಕೇಂದ್ರದ ಸ್ಥಾಪನೆಯ ಬಗ್ಗೆ ವಿವರವಾದ ತಾಂತ್ರಿಕ ವರದಿಯನ್ನು ಪಡೆಯಲಾಗುತ್ತಿದೆ. ಈ ತಾಂತ್ರಿಕ ವರದಿಯನ್ನು ಪಡೆದ ನಂತರ, ಅದನ್ನು ಮಂಡಳಿಯ ತಾಂತ್ರಿಕ ಸಮಿತಿಯ ಮುಂದೆ ಮಂಡಿಸಿ ಸಮಿತಿಯು ತೆಗೆದುಕೊಳ್ಳುವ ತೀರ್ಮಾನದ ಪ್ರಕಾರ ಮುಂದಿನ ಕ್ರಮ ತೆಗೆದುಕೊಳ್ಳಲಾಗುವುದು.

ಕುಣಿಗಲ್ ಕೆರೆಗೆ ಹೇಮಾವತಿ ನೀರು.

678 (1062)ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಬೃಹತ್ ನೀರಾವರಿ ಸಚಿವರುಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಮಾನ್ಯ ಭಾರೀ ಸಚಿವರ ಹೇಳಿಕೆಯಂತೆ ಜೂನ್ 1999ರ ವೇಳೆಗೆ ಕೆರೆಗೆ ಹೇಮಾವತಿ ನೀರು ಹರಿಸುವ ಕಾರ್ಯವನ್ನು ಯಶಸ್ವಿಗೊಳಿಸಲಾಗುವುದೆ,

ಆ) ಈ ನಿಟ್ಟಿನಲ್ಲಿ ಕಾಯೋನ್ಮುಖವಾಗಲು ಇಲಾಖೆಯವರು ಹೇಮಾವತಿ ತುಮಕೂರು ನಾಲೆ 124 ಕಿ.ಮೀ. ನಂತರದ ಕಾಮಗಾರಿಗಳಲ್ಲಿ ಕೈ ಗೊಂಡಿರುವ ಕಾರ್ಯಕ್ರಮಗಳೇನು?

ಶ್ರೀ ಕೆ.ಎನ್.ನಾಗೇಗೌಡ (ಬೃಹತ್ ನೀರಾವರಿ ಸಚಿವರು) :

ಅ) ಡಿಸೆಂಬರ್ 98, ಜನವರಿ ಫೆಬ್ರವರಿ 99ರಲ್ಲಿ ಸರ್ಕಾರಿ ನೌಕರರ ಹಾಗೂ ಇಂಜಿನಿಯರ್‌ಗಳ ಮುಷ್ಕರದಿಂದಾಗಿ ಭೌತಿಕ ಪ್ರಗತಿಯಲ್ಲಿ ಕುಂಠಿತವಾಗಿದ್ದರಿಂದ 1990-2000 ಸಾಲಿನಲ್ಲಿ ಕುಣಿಗಲ್ ಕೆರೆಗೆ ನೀರನ್ನು ಕೊಡುವ ಕಾರ್ಯಕ್ರಮವನ್ನು ಹಾಕಿಕೊಳ್ಳಲಾಗಿದೆ.

ಆ) 124 ರಿಂದ 187ನೇ ಕಿ.ಮೀ.ವರೆಗಿನ ಮುಖ್ಯ ನಾಲಾ ಕಾಮಗಾರಿಯನ್ನು ಎಲ್ಲ ರೀತಿಯಲ್ಲಿ ಪೂರ್ಣಗೊಳಿಸಲು ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುವುದು.

ಬಯಲು ಸೀಮೆ ಅಭಿವೃದ್ಧಿ

679 (1063) ಶ್ರೀ ಎಸ್.ಪಿ. ಮುದ್ದಹನುಮೇಗೌಡ (ಕುಣಿಗಲ್) : ಮಾನ್ಯ ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ ?

ಅ) ಬಯಲುಸೀಮೆ ಅಭಿವೃದ್ಧಿ ಮಂಡಳಿ ಸ್ಥಾಪನೆಯಾದಾಗಿನಿಂದ ಇದುವರೆಗೆ ಸರ್ಕಾರ ನೀಡಿರುವ ಅನುದಾನವೆಷ್ಟು?

ಆ) ಈ ಬಗ್ಗೆ ಅಭಿವೃದ್ಧಿ ಕಾಮಗಾರಿಗಳಿಗೆ ಖರ್ಚು ಮಾಡಿರುವ ಹಣವೆಷ್ಟು?

ಶ್ರೀ ಕೆ. ವೆಂಕಟೇಶ್ (ಪ್ರದೇಶಾಭಿವೃದ್ಧಿ ಮತ್ತು ಕಾಡಾ ರಾಜ್ಯ ಸಚಿವರು) :

ಅ) ಬಯಲು ಸೀಮೆ ಪ್ರದೇಶಾಭಿವೃದ್ಧಿ ಮಂಡಳಿಯು ಅಸ್ತಿತ್ವಕ್ಕೆ ಬಂದಾಗಿನಿಂದ ಇಲ್ಲಿಯವರೆಗೆ ಸರ್ಕಾರದ ಮೂಲಕ ಮಂಡಳಿಗೆ ಬಿಡುಗಡೆ ಮಾಡಲಾದ ವರ್ಷವಾರು ಅನುದಾನ ಹಾಗೂ ಮಂಡಳಿಯು ವಿವಿಧ ಅಭಿವೃದ್ಧಿ ಕಾಮಗಾರಿಗಳ ಅನುದಾನಕ್ಕಾಗಿ ಬಿಡುಗಡೆ ಮಾಡಿದ ಅನುದಾನದ ವಿವರಗಳನ್ನು ಕೆಳಗೆ ನೀಡಲಾಗಿದೆ.

ಆ) (ಲಕ್ಷರೂಗಳಲ್ಲಿ)

ವರ್ಷ:	ಸರ್ಕಾರವು ಮಂಡಳಿಗೆ ಬಿಡುಗಡೆ ಮಾಡಿರುವ ಅನುದಾನ.	ಅಭಿವೃದ್ಧಿ ಕಾಮಗಾರಿಗಳಿಗಾಗಿ ಮಂಡಳಿಯು ಅನುಷ್ಠಾನ ಅಧಿಕಾರಿಗಳಿಗೆ ಬಿಡುಗಡೆ ಮಾಡಿರುವ ಅನುದಾನ.
1995-96	372.75	-
1996-97	418.00	517.96
1997-98	590.00	461.91
1998-99	637.50	261.63
(31-12-98ರ ವರೆಗೆ) ಒಟ್ಟು	**2018.25**	**1241.50**